ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಕೃಷ್ಣತುಂಗಾ ಆವರಣ, ಯರಗೇರಾ. ರಾಯಚೂರು-584133
ಕಾಲೇಜು ಅಭಿವೃದ್ಧಿ ಮಂಡಳಿ

ಕ್ರ.ಸಂ/ರಾವಿರಾ/ಸಿಡಿಸಿ/2023-24/ 128 ದಿನಾಂಕ : 19/02/24

# ಸುತ್ತೋಲೆ

ವಿಷಯ: ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಉಚಿತವಾಗಿ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ನೀಡುವ ಕುರಿತು.

ರಾಯಚೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪ್ರಯತ್ನಿಸುತ್ತಿರುವುದು ಸಂತೋಷದ ವಿಷಯವಾಗಿದೆ. ಸಾಮಾನ್ಯವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಾದ ಯು.ಪಿ.ಎಸ್.ಸಿ/ಕೆ.ಪಿ.ಎಸ್ಸಿ/ ಯುಜಿಸಿ ನೆಟ್/ ಕೆ.ಸೆಟ್/ಬ್ಯಾಂಕಿಂಗ್/ಪಿ.ಎಸ್.ಐ /ರೈಲ್ವೆ/ಎಸ್.ಡಿ.ಎ/ ಎಫ್.ಡಿ.ಎ/ಎಸ್.ಎಸ್.ಸಿ ಇತ್ಯಾದಿ ಖಾಜ್ಯ / ಕೇಂದ್ರ ಸರ್ಕಾರ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪ್ರಮುಖವಾಗಿ Reasoning , Quantitative Aptitude and English Language ಮೇಲೆ ಪ್ರಶ್ನೆಗಳಿರುತ್ತವೆ. ಈ ಹಿನ್ನೆಲೆಯಲ್ಲಿ ರಾಯಚೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಈ ಕುರಿತು ಉಚಿತ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವಲ್ಲಿ ದೀರ್ಘ ಅನುಭವ ಹೊಂದಿರುವ BReT Solutions, Bengaluru ಇವರ ಸಹಯೋಗದೊಂದಿಗೆ ರಾಯಚೂರು ವಿಶ್ವವಿದ್ಯಾಲಯವು 13 ದಿನಗಳ ಕಾಲ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕಾರ್ಯಕ್ರಮವನ್ನು ರಾಯಚೂರು ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ: 11-03-2024 ರಿಂದ 23-03-2024 ರವರೆಗೆ ದಿನಕ್ಕೆ 6 ತಾಸುಗಳ ಕಾಲ 70 ವಿದ್ಯಾರ್ಥಿಗಳಿಗೆ ಮಾತ್ರ ತರಬೇತಿ ಕಾರ್ಯಕ್ರವನ್ನು ಆಯೋಜಿಸಲಾಗಿದೆ.

**ಆಯ್ಕೆ ಪ್ರಕ್ರಿಯೆ:**

**ಹಂತ 1:** ಆಸಕ್ತ ವಿದ್ಯಾರ್ಥಿಗಳು ಮೊದಲು ತಮ್ಮ ಹೆಸರನ್ನು ಎಲ್ಲ ವಿವರಗಳೊಂದಿಗೆ ನಿಗದಿತ ಅರ್ಜಿ ನಮೂನೆಯಲ್ಲಿ ನಿಗದಿತ ದಿನಾಂಕಿನೊಳಗಾಗಿ (on or before 26-02-2024) ನೊಂದಣಿ ಮಾಡಿಕೊಳ್ಳಬೇಕು.

**ಹಂತ 2:** ದಿ. 01-03-2024; 11.00am ಗೆ ಒಂದು ಸರಳ ಲಿಖಿತ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ. ಲಿಖಿತ ಪರೀಕ್ಷೆಯಲ್ಲಿ ಪಡೆದುಕೊಂಡ ಅಂಕಗಳ ಆಧಾರದ ಮೇಲೆ ಮತ್ತು ಕರ್ನಾಟಕ ಸರ್ಕಾರದ ಮೀಸಲಾತಿ ಆಧಾರದ ಮೆಲೆ 1:2 ಅನುಪಾತದಲ್ಲಿ 140 ವಿದ್ಯಾರ್ಥಿಗಳನ್ನು ಸಂದರ್ಶನಕ್ಕೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ

**ಹಂತ 3:** ದಿ. 04-03-2024 ನಡೆಯುವ ಸಂದರ್ಶನ ಹಾಗೂ ಲಿಖಿತ ಪರೀಕ್ಷೆಗಳ ಅಂಕಗಳ ಆಧಾರದ ಮೇಲೆ ಆಯ್ಕೆ ಪ್ರಕ್ರೀಯೆ ಜರುಗಿ, ಈ ಕೆಳಕಂಡ ಮೀಸಲಾತಿ (ರೋಸ್ಟರ್) ಪದ್ಧತಿಯ ಆಧಾರದ ಮೂಲಕ 70 ವಿದ್ಯಾರ್ಥಿಗಳನ್ನು ತರಬೇತಿ ಕಾರ್ಯಕ್ರಮಕ್ಕೆ ಆಯ್ಕೆ ಮಾಡಲಾಗುವುದು

| GM | SC | ST | Cat-1 | II (A) | II (B) | III (A) | III (B) |
|---|---|---|---|---|---|---|---|
| 31 | 12 | 5 | 3 | 11 | 3 | 2 | 3 |

**ಹಂತ 4:** ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕಾರ್ಯಕ್ರಮವು ದಿನಾಂಕ:11-03-2024 ರಿಂದ 23-03-2024ರ ವರೆಗೆ ದಿನಾಲೂ 6 ಗಂಟೆಗಳ ಕಾಲ ಜರುಗುವುದು. ಆಯ್ಕೆಯಾದ ವಿದ್ಯಾರ್ಥಿಗಳು ತಪ್ಪದೇ ಎಲ್ಲ ತರಬೇತಿ ವರ್ಗಗಳಿಗೆ ಹಾಜರಾಗಬೇಕು ಅಂದರೆ ಮಾತ್ರ ತರಬೇತಿಯ ಪೂರ್ಣ ಲಾಭವನ್ನು ಪಡೆಯಬಹುದು.

**ಸ್ಪರ್ಧಾತ್ಮಕ ತರಬೇತಿ ಕಾರ್ಯಕ್ರಮಕ್ಕೆ ಸಂಬಂಧಿಸಿದ ಮುಖ್ಯ ದಿನಾಂಕಗಳು.**

| ಕ್ರ.ಸಂ | ವಿಷಯ | ದಿನಾಂಕ |
|---|---|---|
| 1 | ತರಬೇತಿ ಕಾರ್ಯಕ್ರಮಕ್ಕೆ ನೊಂದಾಯಿಸಿಕೊಳ್ಳಲು ಕೊನೆಯ ದಿನಾಂಕ | 26-02-2024 |
| 2 | ಲಿಖಿತ ಪರೀಕ್ಷೆಯ ದಿನಾಂಕ | 01-03-2024; 11.00am |
| 3 | ಸಂದರ್ಶನದ ದಿನಾಂಕ | 04-03-2024 |
| 4 | ತರಬೇತಿಯ ಅವಧಿ | 11-03-2024 ರಿಂದ 23-03-2024 |

**ವಿಶೇಷ ಸೂಚನೆ:**

1. ತರಬೇತಿ ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಕಾಲಕಾಲಕ್ಕೆ ಅವಶ್ಯಕ ಮಾಹಿತಿಯನ್ನು ಅರ್ಜಿಯಲ್ಲಿ ನೀಡಲಾದ ಮೊಬೈಲ್ ಮತ್ತು email id ಗೆ ಮಾಹಿತಿಯನ್ನು ನೀಡಲಾಗುವುದು ಅಲ್ಲದೇ ಸೂಚನಾ ಫಲಕದ ಮೇಲೆ ವಿವರವನ್ನು ಅಂಟಿಸಲಾಗುವುದು
2. ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ Attendance Certificate ಮತ್ತು Certificate of Training ನೀಡಲಾಗುವುದು
3. ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಮಧ್ಯಾನ್ಹದ ಊಟದ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳಬೇಕು.
4. ತರಬೇತಿಗೆ ಬೇಕಾಗುವ Training Materialನ್ನು ಅವಶ್ಯಕತೆಗೆ ಅನುಗುಣವಾಗಿ ನೀಡಲಾಗುವುದು.

19/7/24

ಕುಲಸಚಿವರು

ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು

ಪ್ರತಿಗಳು :

1. ಕುಲಸಚಿವರು (ಮೌಲ್ಯಮಾಪನ), ರಾಯಚೂರು ವಿಶ್ವವಿದ್ಯಾಲಯ ರಾಯಚೂರು.
2. ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ ರಾಯಚೂರು
3. ಕುಲಪತಿಗಳ/ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ರಾಯಚೂರು ವಿಶ್ವವಿದ್ಯಾಲಯ ರಾಯಚೂರು.
4. ಸಂಯೋಜನಕರು, ಎಲ್ಲಾ ಅಧ್ಯಯನ ವಿಭಾಗಗಳು, ರಾಯಚೂರು ವಿಶ್ವವಿದ್ಯಾಲಯ ರಾಯಚೂರು.
5. ಕಛೇರಿ ಪ್ರತಿ.

ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಕೃಷ್ಣತುಂಗಾ ಆವರಣ, ಯರಗೇರಾ, ರಾಯಚೂರು-584133
ಕಾಲೇಜು ಅಭಿವೃದ್ಧಿ ಮಂಡಳಿ

ಕ್ರ.ಸಂ/ರಾವಿರಾ/ಸಿಡಿಸಿ/2023-24/ ದಿನಾಂಕ :

**ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ಕಾರ್ಯಕ್ರಮ**

11-03-2024 ರಿಂದ 23-3-2024ರ ವರೆಗೆ

## Application

Name of the student :

Post graduate Department and Semester:

Gender:

Date of Birth:

Category:

Permnent Addres:

Mobile Phone No:

Email id:

## Declaration by Student

" I Know that the said training Program is Free and I assure my commitment to take the full advantage of the training program without missing the Classes."

Signature of the student participant